ಕರ್ನಾಟಕ ಸರ್ಕಾರ
**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ: ಕಾಶಿಇ/174/ತಾಂಕೋ/K-GIS/2022-23

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು, ದಿನಾಂಕ : 10/02/2023

# ಸುತ್ತೋಲೆ

ವಿಷಯ: ಈ ಇಲಾಖಾ ವ್ಯಾಪ್ತಿಯಲ್ಲಿ ಬರುವ ಕಾಲೇಜು/ಕಛೇರಿಗಳ ಅಸೆಟ್ ರಿಜಿಸ್ಟರ್‌ಗಳನ್ನು ಕರ್ನಾಟಕ ಭೌಗೋಳಿಕ ಮಾಹಿತಿ ವ್ಯವಸ್ಥೆ (K-GIS) ನಲ್ಲಿ ರಚಿಸುವ ಕುರಿತು.

ಉಲ್ಲೇಖ : ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಇ-ಆಡಳಿತ ಕೇಂದ್ರ, ಬೆಂಗಳೂರು ಇವರ ಪತ್ರ ಸಂಖ್ಯೆ: CEG-13011/3/2021-EPROCUREMENT, ದಿನಾಂಕ: 18.01.2023.

* * * * *

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರವನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸುತ್ತಾ, ಸದರಿ ಪತ್ರದಲ್ಲಿ ತಿಳಿಸಲಾಗಿರುವಂತೆ, ಕಾಲೇಜು/ಕಛೇರಿಗಳ ಆಸ್ತಿ ಮಾಹಿತಿಯನ್ನು ಕಡ್ಡಾಯವಾಗಿ K-GIS ಪೋರ್ಟಲ್‌ನಲ್ಲಿ ಅಳವಡಿಸಲು ಅಗತ್ಯ ಕ್ರಮ ವಹಿಸುವಂತೆ ಸೂಚಿಸಲಾಗಿದೆ. ಅದರಂತೆ ಇಲಾಖಾ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳ ಆಸ್ತಿಗಳನ್ನು K-GIS ಪೂರ್ಟಲ್‌ನಲ್ಲಿ ಅಳವಡಿಸುವ ಸಂಬಂಧ ಅಗತ್ಯ ಕ್ರಮ ವಹಿಸಲು ಮಾಹಿತಿ ಹಾಗೂ ಸಹಕಾರಕ್ಕಾಗಿ **ಶ್ರೀ ರಾಜಶೇಖರ್. ಎ ಎಸ್, ಗ್ರೂಪ್ ಹೆಡ್, ಕೆ.ಜಿ.ಐ.ಎಸ್, ಕರ್ನಾಟಕ ದೂರ ಸಂವೇದಿ ಅನ್ವಯಿಕ ಕೇಂದ್ರ ಇವರನ್ನು ದೂರವಾಣಿ ಸಂಖ್ಯೆ: 9880369958** ಮೂಲಕ ಸಂಪರ್ಕಿಸಬಹುದಾಗಿದೆ.

"ಟಿಪ್ಪಣಿ ಮಾನ್ಯ ಆಯುಕ್ತರಿಂದ
ಅನುಮೋದಿಸಲ್ಪಟ್ಟಿದೆ"

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

1. ಈ ಇಲಾಖಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ/ಸಂಸ್ಕೃತ/ಚಿತ್ರಕಲಾ ಕಾಲೇಜುಗಳಿಗೆ - ಅಗತ್ಯ ಕ್ರಮಕ್ಕಾಗಿ
2. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ, ಬೆಂಗಳೂರು/ಮೈಸೂರು/ಮಂಗಳೂರು/ಶಿವಮೊಗ್ಗ/ಧಾರವಾಡ/ಕಲಬುರಗಿ - ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ
3. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಇ-ಆಡಳಿತ ಕೇಂದ್ರ, ಇ-ಪ್ರೊಕ್ಯುರ್‌ಮೆಂಟ್ ಸೆಲ್, 4ನೇ ಮಹಡಿ, ಶ್ರೀ ಅರವಿಂದ ಭವನ, ಮಿಥಿಕ್ ಸೊಸೈಟಿ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು - ಟೆಂಡರ್ ಪ್ರಕ್ರಿಯೆಯನ್ನು ಈ ಇಲಾಖೆಯಿಂದ ನಿರ್ವಹಿಸದೇ ಸರ್ಕಾರ ನಿಗದಿಗೊಳಿಸುವ ಅಂಗೀಕೃತ ನಿರ್ಮಾಣ ಸಂಸ್ಥೆಗಳು ನೇರವಾಗಿ ಟೆಂಡರ್ ಆಹ್ವಾನಿಸಿ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗಿರುತ್ತದೆ ಎಂಬ ಮಾಹಿತಿಯನ್ನು ಅವಗಾಹನೆಗೆ ತರಲಾಗಿದೆ.

ಪ್ರತಿಯನ್ನು :

1. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಕೇಂದ್ರ ಕಛೇರಿ, ಬೆಂಗಳೂರು - ಸದರಿ ಸುತ್ತೋಲೆಯನ್ನು ಇಲಾಖೆಯ ಜಾಲತಾಣದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
2. ಕಛೇರಿ ಪ್ರತಿ.

ಶಾ.ಕಾ.ಶಾಖೆ 18
ಉಪನ್ಯಾ
21/1/23
536774H1
21/01/2023

CENTRE FOR e-GOVERNANCE

**CENTRE FOR e-GOVERNANCE**
**(Society established by the Government of Karnataka under e-Governance Secretariat, DPAR [AR] and registered under Karnataka Societies Registration Act, 1960);**
**e-Procurement Cell, 4th Floor, Sri Aravinda Bhavan, Mythic Society Building, Nrupathunga Road Bangalore – 560 001**
**Phone: 080 -22234115, 22230960 e-mail: pdeproc@karnataka.gov.in**

CEG-13011/3/2021-EPROCUREMENT ದಿನಾಂಕ: 18-01-2023

ಇವರಿಗೆ,

ಆಯುಕ್ತರು

ಉನ್ನತ ಶಿಕ್ಷಣ ಸೌಧ, ಕಾಲೇಜು ಶಿಕ್ಷಣ ಇಲಾಖೆ,

ಶೇಷಾದ್ರಿ ರಸ್ತೆ, ಬೆಂಗಳೂರು -560001

ಮಾನ್ಯರೆ,

ವಿಷಯ: ತಮ್ಮ ಇಲಾಖೆಗಳಿಗೆ ಸಂಬಂಧಿಸಿದ ಅಸೆಟ್ ರಿಜಿಸ್ಟರ್‌ಗಳನ್ನು ಕರ್ನಾಟಕ ಭೌಗೋಳಿಕ ಮಾಹಿತಿ ವ್ಯವಸ್ಥೆ (K-GIS) ನಲ್ಲಿ ರಚಿಸುವ ಹಾಗೂ ಕಾಮಗಾರಿಗಳ ಅನುಷ್ಠಾನ ಭೌತಿಕ ಪ್ರಗತಿ, ಆರ್ಥಿಕ ಪ್ರಗತಿಯನ್ನು ಪರಿಶೀಲಿಸಲು ಗಾಂಧಿ ಸಾಕ್ಷಿ ಕಾಯಕ 2.0 ತಂತ್ರಾಂಶವನ್ನು ಬಳಸುವ ಕುರಿತು.

********

Sr. BKT
24/01

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ 2.0 ನಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯನ್ನು ಹೆಚ್ಚಿಸುವ ಹಾಗೂ ಟೆಂಡರ್‌ಗಳ ಸ್ಥಿತಿಗಳನ್ನು ಸಮಯ ಬದ್ಧವಾಗಿ ಮೇಲ್ವಿಚಾರಣೆ ನಡೆಸುವ ಉದ್ದೇಶದಿಂದ ಕಾಂಟ್ರಾಕ್ಟ್ ಮ್ಯಾನೇಜಮೆಂಟ್‌ನ್ನು ಕಡ್ಡಾಯವಾಗಿ ಬಳಸಬೇಕಾಗಿದೆ. ಈ ನಿಟ್ಟಿನಲ್ಲಿ ಅಡಿಪಾಯದ ಹಂತವೆಂಬಂತೆ ಪ್ರಸ್ತುತ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಅಂದಾಜು ತಯಾರಿಕೆ ಹಂತದಲ್ಲೇ ಅಸೆಟ್ ವಿವರಗಳನ್ನು ಸಂಗ್ರಹಿಸಲು ಕರ್ನಾಟಕ ಭೌಗೋಳಿಕ ಮಾಹಿತಿ ವ್ಯವಸ್ಥೆ (K-GIS) ತಂತ್ರಾಂಶದೊಂದಿಗೆ ಸಂಯೋಜನೆ ಮಾಡಲಾಗುತ್ತಿದೆ.

ಈಗಾಗಲೇ ಕೆಜಿಐಎಸ್ ಕಾರ್ಯಕ್ರಮದಡಿಯಲ್ಲಿ ಅನೇಕ ಇಲಾಖೆಗಳ ಆಸ್ತಿಗಳನ್ನು ಆಯಾ ಇಲಾಖೆಗಳ ಸಹಯೋಗದೊಂದಿಗೆ ಸಂಗ್ರಹಿಸಿ ಕೆಜಿಐಎಸ್ ಪೋರ್ಟಲ್‌ನಲ್ಲಿ ಲಭ್ಯಗೊಳಿಸಲಾಗಿದೆ. ಆದರೆ, ಎಲ್ಲಾ ಇಲಾಖೆಗಳ ಎಲ್ಲಾ ಆಸ್ತಿಗಳ ಮಾಹಿತಿಗಳನ್ನು ಸಂಗ್ರಹಿಸಿರುವುದಿಲ್ಲ ಹಾಗೂ ಸಂಗ್ರಹಿಸಿರುವ ಆಸ್ತಿಗಳ ಮಾಹಿತಿಗಳನ್ನು ಇಂದೀಕರಿಸಿರುವುದಿಲ್ಲ (update). ಇದರಿಂದಾಗಿ ಪ್ರಸ್ತುತ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಅಂದಾಜು (Estimate) ತಯಾರಿಸುವ ಹಂತದಲ್ಲಿ ಆಸ್ತಿಗಳ ವಿವರಗಳು ಲಭ್ಯವಾಗುತ್ತಿಲ್ಲ.

ತಮ್ಮ ಇಲಾಖೆ ಹಾಗೂ ಅಧೀನ ಸಂಸ್ಥೆಗಳಿಗೆ ಸಂಬಂಧಿಸಿದ ಆಸ್ತಿಗಳ ಮಾಹಿತಿಯು ಈಗಾಗಲೇ ಕೆಜಿಐಎಸ್ ಪೋರ್ಟಲ್ ನಲ್ಲಿ ಲಭ್ಯವಿದ್ದಲ್ಲಿ ಅವುಗಳನ್ನು ಪುನಃ ಪರಿಶೀಲಿಸಿ ದೃಢೀಕರಿಸಲು ಹಾಗೂ ಇಂದೀಕರಿಸಿದ ಮಾಹಿತಿಯನ್ನು ಅವುಗಳ ಗುಣಲಕ್ಷಣಗಳ (Attributes) ಜೊತೆಗೆ ಕೆಜಿಐಎಸ್ ಪೋರ್ಟಲ್ ನಲ್ಲಿ ಅಳವಡಿಸುವಂತೆ ಹಾಗೂ ಒಂದು ವೇಳೆ ಆಸ್ತಿಗಳ ಮಾಹಿತಿಯು ಕೆಜಿಐಎಸ್ ಪೋರ್ಟಲ್ ನಲ್ಲಿ ಲಭ್ಯವಿಲ್ಲದಿದ್ದರೆ ಅವುಗಳನ್ನು ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರವು ಅಭಿವೃದ್ಧಿಪಡಿಸಿರುವ ಮೊಬೈಲ್ ಅನ್ವಯಿಕೆ ಮೂಲಕ ಸಂಗ್ರಹಿಸಿ ಕೆಜಿಐಎಸ್ ಪೋರ್ಟಲ್ ನಲ್ಲಿ ಅಳವಡಿಸಲು ಸೂಚಿಸಿದೆ.

ಮುಂದಿನ ದಿನಗಳಲ್ಲಿ ಟೆಂಡರ್‌ಗಳನ್ನು ಪ್ರಕಟಿಸಬೇಕಿದ್ದಲ್ಲಿ ತಮ್ಮ ಇಲಾಖೆಯ ಅಧೀನದಲ್ಲಿರುವ ಎಲ್ಲಾ ಆಸ್ತಿಗಳ ವಿವರಗಳನ್ನು ಕೆಜಿಐಎಸ್ ಪೋರ್ಟಲ್ ನಲ್ಲಿ ಅಳವಡಿಸುವುದು ಕಡ್ಡಾಯವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಶ್ರೀ. ರಾಜಶೇಖರ್ ಎ ಎಸ್, ಗ್ರೂಪ್ ಹೆಡ್, ಕೆಜಿಐಎಸ್, ಕರಾದೂಸಂಅ ಕೇಂದ್ರ ಇವರನ್ನು ದೂರವಾಣಿ ಸಂಖ್ಯೆ: 9880369958 ಮೂಲಕ ಸಂಪರ್ಕಿಸಬಹುದಾಗಿದೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ 2.0 ರಲ್ಲಿ ಪೋಸ್ಟ್ ಟೆಂಡರಿಂಗ್ ಪ್ರಕ್ರಿಯೆಯನ್ನು (ಕಾಂಟ್ರಾಕ್ಟ್ ಮ್ಯಾನೇಜ್‌ಮೆಂಟ್ ಮಾಡ್ಯೂಲ್) ಅಭಿವೃದ್ಧಿಪಡಿಸಲಾಗುತ್ತಿದ್ದು ಅಲ್ಲಿಯವರೆಗೂ ತಮ್ಮ ಅಧೀನದಲ್ಲಿ ಬರುವ ಎಲ್ಲಾ ಸಂಗ್ರಹಣಾ ಘಟಕಗಳು ಗಾಂಧಿ ಸಾಕ್ಷಿ ಕಾಯಕ 2.0 ತಂತ್ರಾಂಶವನ್ನು ಕಾಮಗಾರಿಗಳ ಅನುಷ್ಠಾನ,ಭೌತಿಕ ಹಾಗೂ ಆರ್ಥಿಕ ಪ್ರಗತಿಯನ್ನು ಪರಿಶೀಲಿಸಲು ಉಪಯೋಗಿಸುವಂತೆ ಸೂಚಿಸಿದೆ.

ತಮ್ಮ ವಿಶ್ವಾಸಿ

ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಇ-ಆಡಳಿತ ಕೇಂದ್ರ